ಹೊಸ ತಲೆಮಾರಿನ ಕರ್ನಾಟಕ ಸಂಗೀತ ಕಲಾವಿದರಲ್ಲಿ ತುಸು ಒಡೆದುನಿಲ್ಲುವ ಕಲಾವಿದ ಟಿ.ಎಂ. ಕೃಷ್ಣ. ಕರ್ನಾಟಕ ಸಂಗೀತದ ಹೆಚ್ಚಿನ ಕಲಾವಿದರಂತೆ ಸಾಂಪ್ರದಾಯಿಕ ವೈದಿಕ ಕುಟುಂಬದಿಂದ ಬಂದು, ಸಂಗೀತವನ್ನು ತೀರಾ ಸಾಂಪ್ರದಾಯಿಕ ರೀತಿಯಲ್ಲಿ ಕಲಿತವರು. ತಾಯಿಯಿಂದ ಸಂಗೀತಕ್ಕೆ ಪ್ರವೇಶ ಪಡೆದ ಕೃಷ್ಣ, ಸಂಗೀತಗಾರ ಬಿ. ಸೀತಾರಾಮ ಶರ್ಮ ಅವರಲ್ಲಿ ಹಲವು ವರ್ಷಗಳು ಕಲಿತು, ಮುಂದೆ ರಾಗ–ತಾನ–ಪಲ್ಲವಿಯ ತರಬೇತಿಯನ್ನು ವಿದ್ವಾನ್ ಚೆಂಗಲ್‌ಪೇಟ್ ರಂಗನಾಥನ್ ಅವರ ಬಳಿ ಪಡೆದರು. ಅನಂತರ ಅತ್ಯಂತ ಸಂಪ್ರದಾಯವಾದಿಯೂ, ಶ್ರೇಷ್ಠ ವಿದ್ವಾಂಸರೂ ಆದ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರ ಮೆಚ್ಚಿನ ಶಿಷ್ಯರಾದರು. ಬಹುಬೇಗ ಖ್ಯಾತಿ ಪಡೆದರು. ಕೀರ್ತಿ–ಹಣ ಯಾವುದಕ್ಕೂ ಕೊರತೆಯಿರಲಿಲ್ಲ. ಜನ ಸದಾ ಅವರ ಸಂಗೀತಕ್ಕೆ ಮುಗಿಬೀಳುತ್ತಿದ್ದರು. ಆದರೆ ಕ್ರಮೇಣ ಏನೋ ಅತೃಪ್ತಿ ಅವರನ್ನು ಕಾಡತೊಡಗಿತು. ಜಿಡ್ಡು ಕೃಷ್ಣಮೂರ್ತಿಯವರ ಚಿಂತನೆಯ ಹಿನ್ನೆಲೆಯಲ್ಲಿ ಬೆಳೆದ ಇವರಿಗೆ, ಸಂಗೀತ ಎಂದರೆ ಅದು ಆತ್ಮದ ಅಭಿವ್ಯಕ್ತಿ, ಅದು ಕೇವಲ ಕಲಿತದ್ದರ ಪ್ರಸ್ತುತಿಯಲ್ಲ ಎನಿಸಲಾರಂಭಿಸಿತು.

"ಒಂದು ಮಟ್ಟದ ಔನ್ನತ್ಯ ತಲುಪಿದ ಮೇಲೆ ಕಂಠ, ಗಾಯನ ತಂತ್ರಗಳು ಎಲ್ಲಾ ಪರಿಕರಗಳೂ ನಿಮ್ಮ ಬೆರಳ ತುದಿಯಲ್ಲಿರುತ್ತವೆ. ಏನು ಹಾಡಬೇಕು, ಜನ ಯಾವುದನ್ನು ಮೆಚ್ಚುತ್ತಾರೆ ಎಂಬುದೆಲ್ಲಾ ನಿಖರವಾಗಿ ತಿಳಿದಿರುತ್ತದೆ. ನೀವು ಯಾವುದನ್ನು ಸುಂದರ ಎಂದು ಪರಿಗಣಿಸುತ್ತೀರಿ ಮತ್ತು ನಾನೇನನ್ನು ಸುಂದರವೆಂದು ಭಾವಿಸುತ್ತೇನೆ ಎರಡೂ ತಿಳಿದಿರುತ್ತದೆ. ಆ ಸುಂದರವಾದದ್ದನ್ನು ನಿಮಗೆ ನಾನು ಸರಬರಾಜು ಮಾಡಬೇಕು. ಕೊನೆಯಲ್ಲಿ ನಾವಿಬ್ಬರೂ ಸಂತುಷ್ಟರು. ನಿಜವಾಗಿ ಇದು ನನ್ನನ್ನು ತುಂಬಾ ಕಾಡಿಸಿತು. ಸೌಂದರ್ಯವನ್ನು ಡೆಲಿವರ್ ಮಾಡುವುದು ಅನ್ನೋದೇ ಅಸಹ್ಯಕರ ಅಲ್ಲವೇ? ಅದು ಅದರಷ್ಟಕ್ಕೇ ಆಗಬೇಕು. ನೀವು ಸರಬರಾಜು ಮಾಡುವುದಕ್ಕೆ ಸಾಧ್ಯವಿಲ್ಲ. ನನಗಿದು ಮೋಸವೆನಿಸಿತು. ಆದರೆ ನಿಜವಾಗಿ ಏನಾಗುತ್ತಿದೆ ಅನ್ನುವುದು ಸ್ಪಷ್ಟವಾಗಿರಲಿಲ್ಲ. ಅಲ್ಲಿಂದ ನನ್ನ ಒದ್ದಾಟ, ಹುಡುಕಾಟ ಪ್ರಾರಂಭವಾಯ್ತು. ಈ ಸಂಗೀತ ಎಲ್ಲಿಂದ ಬಂತು ಎನ್ನುವುದನ್ನು ಹುಡುಕಲು ಹಲವು ವರ್ಷಗಳು ಪುರಾತನ ಗ್ರಂಥಗಳನ್ನು ಓದಿದೆ. ಅನೇಕ ಸಂಸ್ಕೃತ ವಿದ್ವಾಂಸರು ಸಹಾಯ ಮಾಡಿದರು. ಒಂದು ರಾಗ ಇನ್ನೂರು ವರ್ಷಗಳ ಹಿಂದೆ ಹೇಗಿದ್ದಿರಬಹುದು, ಅದನ್ನು ಮತ್ತೆ ಕಟ್ಟಿಕೊಳ್ಳಬಹುದಾ ಎಂದು ಶೋಧಿಸುತ್ತಾ ಹೋದೆ. ಶಾಸ್ತ್ರಗ್ರಂಥವೊಂದಕ್ಕೆ ಅನುಗುಣವಾಗಿ ರಾಗವನ್ನು ಹಾಡಿದಾಗ ಅದೆಷ್ಟು ಭಯಂಕರವಾಗಿತ್ತೆಂದರೆ, ನಾನು ತುಂಬಾ ಹೆದರಿಬಿಟ್ಟೆ. ನನಗದು ಸುಂದರವಾಗಿ ತೋರಲಿಲ್ಲ. ಹಾಗಾದರೆ ಸೌಂದರ್ಯ ಎನ್ನುವುದು ಆಯಾ ಕಾಲಘಟ್ಟಕ್ಕೆ ಮತ್ತು ಸಂಸ್ಕೃತಿಗೆ ನಿರ್ದಿಷ್ಟವಾದುದೇ ಇತ್ಯಾದಿ ಪ್ರಶ್ನೆಗಳು ಎದುರಾದುವು. ಇವುಗಳಿಗೆ ನನ್ನ ಬಳಿಯೂ ಉತ್ತರವಿಲ್ಲ. ಈ ಪ್ರಶ್ನೆಗಳನ್ನು ಕೇಳಿಕೊಂಡಿದ್ದೇ ತಡ ನೂರಾರು ಪ್ರಶ್ನೆಗಳು ಮುತ್ತಿಕೊಂಡವು. ನನ್ನ ಪುಟ್ಟ ಕರ್ನಾಟಕ ಸಂಗೀತದ ಜಗತ್ತಿನಲ್ಲಿ, ಬ್ರಾಹ್ಮಣ ಜಗತ್ತಿನಲ್ಲಿ ಸೌಂದರ್ಯ ಅಂದರೇನು ಎಂದು ನಾನು ಒದ್ದಾಡುತ್ತಿರುವಾಗ, ಇನ್ನು ನಾನು ಗಮನಿಸಿಯೇ ಇಲ್ಲದ ವಿಶಾಲಪ್ರಪಂಚದ ಕಥೆ ಏನು? ನಾನು ಈ ಬಾವಿಯಲ್ಲಿ ಸುರಕ್ಷಿತವಾಗಿದ್ದೆ. 1998ರ ಟಿ.ಎಂ. ಕೃಷ್ಣ ಈಗ ನನ್ನೊಂದಿಗೆ ಮುಖಾಮುಖಿಯಾದರೆ "ಏನು ಮಾತನಾಡುತ್ತಿದ್ದೀಯಾ? ಇದು ಅತ್ಯಂತ ಸುಂದರವಾದ ಸಂಗೀತ. ಇದೆಂತಹ ಹುಚ್ಚು ಪ್ರಶ್ನೆಗಳನ್ನು ಕೇಳುತ್ತಿದ್ದೀಯ," ಅಂತ ಬೇಸರಿಸಿಕೊಳ್ಳುತ್ತಿದ್ದ. ಆದರೆ ನಮಗೆ ಬೇರೆ ಸಂಗೀತಗಳ ಬಗ್ಗೆ ಗೌರವವಿಲ್ಲ ಅನ್ನೋದು ನಿಜ. ಸಿನಿಮಾ ಸಂಗೀತ, ಜಾನಪದ ಸಂಗೀತ ಇತ್ಯಾದಿಗಳಿಗಿಂತ ನಮ್ಮ ಸಂಗೀತ ಇದೆಯಲ್ಲ ಅದು ತುಂಬಾ ಶ್ರೇಷ್ಠವೆಂಬ ಭಾವನೆ ನಮಗಿದೆ."

ನಾವು ಬೇರೆ ಸಂಗೀತವನ್ನು, ಅದರ ಧ್ವನಿಯನ್ನು ಇಷ್ಟಪಡುತ್ತಿಲ್ಲ ಅಂದರೆ ಅದನ್ನು ನಿಜವಾಗಿ ನಾವು ಕೇಳಿಸಿಕೊಳ್ಳುತ್ತಿಲ್ಲ ಎಂದರ್ಥ. ನಾವು ಬೇರೆ ಧ್ವನಿಗಳನ್ನು ಕೇಳಿಸಿಕೊಳ್ಳಬೇಕಾಗಿದೆ.